OS –311/2022 (Pw-1)

ದಿನಾಂಕ 17-11-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಶ್ರೀ. ಪಿ.ವೈ.ಪಿ ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿದ ಎಲ್ಲ ಸಂಗತಿಗಳು ಸತ್ಯವಾಗಿವೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ. ನನ್ನ ಪ್ರಮಾಣ ಪತ್ರ ಲಗತ್ತು ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನನ್ನ ಪರ ನಿಶಾನೆಗಳಾಗಿ ಗುರುತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸದರಿ ಪ್ರಕರಣದಲ್ಲಿ ನಾನು ಹಾಜರು ಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

1. ನಮ್ಮ ಯಜಮಾನರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು,

2. ನನ್ನ ಯಜಮಾನರ ಮೊದಲನೇ ಹೆಂಡತಿಯಾದ ರತ್ನವ್ವ ರವರ ಮರಣ ಪ್ರಮಾಣ ಪತ್ರದ ನೋಟರೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-2 ಎಂದು,

3. ನನ್ನ ಆಧಾರ ಕಾರ್ಡನ ನೋಟರೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-3 ಎಂದು,

4. 1 ನೇ ಪ್ರತಿವಾದಿಯ ಆಧಾರ ಕಾರ್ಡನ ನೋಟರೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-4 ಎಂದು,

5. 2 ನೇ ಪ್ರತಿವಾದಿಯ ಆಧಾರ ಕಾರ್ಡನ ನೋಟರೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-5 ಎಂದು,

6. 3 ನೇ ಪ್ರತಿವಾದಿಯ ಆಧಾರ ಕಾರ್ಡನ ನೋಟರೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-6 ಎಂದು,

7. 4 ನೇ ಪ್ರತಿವಾದಿಯ ಆಧಾರ ಕಾರ್ಡನ ನೋಟರೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-7 ಎಂದು,

8. 5 ನೇ ಪ್ರತಿವಾದಿಯ ಆಧಾರ ಕಾರ್ಡನ ನೋಟರೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-8 ಎಂದು,

9. ತಹಶೀಲ್ದಾರ ಕಛೇರಿಯಿಂದ ನೀಡಿದ ಹಿಂಬರಹವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ಆದುದರಿಂದ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>**

ಮೃತ ಮಹಾದೇವ ನನ್ನ ಗಂಡನಾಗಬೇಕು. ನನ್ನ ಗಂಡ ಈ ಮೊದಲು ರತ್ನವ್ವ ಎನ್ನುವವರನ್ನು ಮದುವೆಯಾಗಿದ್ದ ಎಂದರೆ ನಿಜ. ಸದರಿಯವರ ದಾಂಪತ್ಯದಿಂದ ಪ್ರತಿವಾದಿ 1 ರಿಂದ 5 ರವರು ಜನಿಸಿರುತ್ತಾರೆ ಎಂದರೆ ನಿಜ. ಸದರಿ ಮೊದಲನೇ ಪತ್ನಿಯ ಮರಣದ ನಂತರ ನನ್ನನ್ನು ಮದುವೆಯಾಗಿರುತ್ತಾರೆ ಎಂದರೆ ನಿಜ. ನನಗೆ ಯಾವುದೇ ಮಕ್ಕಳಿರುವುದಿಲ್ಲ ಎಂದರೆ ನಿಜ. ಪ್ರತಿವಾದಿ 1 ರಿಂದ 5 ರವರನ್ನು ನನ್ನ ಮಕ್ಕಳು ಎಂದು ನಾನು ಸಾಕಿ ಸಲಗಿರುತ್ತೇನೆ ಎಂದರೆ ನಿಜ. ನನ್ನನ್ನು ಹಾಗೂ ಪ್ರತಿವಾದಿ 1 ರಿಂದ 5 ರವರನ್ನು ಹೊರತು ಪಡಿಸಿ ಮೃತ ಮಹಾದೇವರಿಗೆ ಬೇರೆ ಯಾವುದೇ ವಾರಸುದಾರರು ಇಲ್ಲ ಎಂದರೆ ನಿಜ. ಪ್ರತಿವಾದಿ 1 ರಿಂದ 5 ರವರನ್ನು ಸಹ ವಾರಸುದಾರರು ಎಂದು ಘೋಷಿಸಲು ನನ್ನ ಯಾವುದೇ ಅಭ್ಯಂತರ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.